ಆ) ಈ ರೀತಿ ಸ್ಥಳಾಂತರವಾಗಿರುವುದರಿಂದ ಟಿ. ಬಿ. ಪೇಷಂಟ್‌ಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಟಿ.ಬಿ. ವಾರ್ಡ್‌ಗಳನ್ನು ಸದರಿ ಆಸ್ಪತ್ರೆಗಳಲ್ಲಿ ಪುನಃ ಪ್ರಾರಂಭಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಕೆ.ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಮಂತ್ರಿಗಳು).—

ಅ) ಇಲ್ಲ.

ಆ) ಇಲ್ಲ.

ಇ) ಕಾರ್ಮಿಕ ರಾಜ್ಯ ವಿಮಾ ನಿಯಮಾವಳಿಯನುಸಾರ ಟಿ. ಬಿ. ವಾರ್ಡ್‌ಗಳನ್ನು ಸ್ಥಾಪಿಸಲು ಅವಕಾಶವಿರುವುದಿಲ್ಲ.

ರಾಜಾಜಿನಗರದ ಇ.ಎಸ್.ಐ. ಆಸ್ಪತ್ರೆಯಲ್ಲಿ ಔಷಧಿ ಕದ್ದು ಮಾರಾಟ

೩೦೩. ಶ್ರೀ ಎ. ಕೃಷ್ಣಪ್ಪ (ವರ್ತೂರು).—ಮಾನ್ಯ ಕಂದಾಯ ಹಾಗೂ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ರಾಜಾಜಿನಗರ ಇ. ಎಸ್. ಐ. ಆಸ್ಪತ್ರೆಯಲ್ಲಿ ಔಷಧಿ ಕದ್ದು ಮಾರಾಟ ಮಾಡುವಾಗ ಸಿಕ್ಕಿ ಬಿದ್ದ ನೌಕರರ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ,

ಆ) ಈಗಲೂ ಕೆಲವು ಇ.ಎಸ್.ಐ. ಆಸ್ಪತ್ರೆಗಳಲ್ಲಿ ಔಷಧಿಗಳನ್ನು ಕದ್ದು ಮಾರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಈ ಅವ್ಯವಹಾರಗಳನ್ನು ತಡೆಗಟ್ಟಲು ಸರ್ಕಾರದವರು ತೆಗೆದುಕೊಳ್ಳುವ ದೃಢ ಕ್ರಮಗಳೇನು ?

ಶ್ರೀ ಕೆ.ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು).—

ಅ) ರಾಜಾಜಿನಗರ ಇ.ಎಸ್.ಐ. ಆಸ್ಪತ್ರೆಯಲ್ಲಿ ಔಷಧಿ ಕದ್ದು ಮಾರುವಾಗ ಸಿಕ್ಕಿ ಬಿದ್ದ ೫ ಜನ ನೌಕರರ ಬಗ್ಗೆ ಸಿ. ಸಿ. ಎ. ನಿಯಮದ ಪ್ರಕಾರ ಕ್ರಮ ಜರುಗಿಸಲಾಗಿದೆ.

ಆ) ಇಲ್ಲ.

ಇ) ಇಂತಹ ಅವ್ಯವಹಾರಗಳನ್ನು ತಡೆಗಟ್ಟಲು ಈ ಇಲಾಖೆಯ ಅಧೀನದಲ್ಲಿರುವ ಆಸ್ಪತ್ರೆಗಳು ಮತ್ತು ಚಿಕಿತ್ಸಾಲಯಗಳಿಗೆ ನಿರ್ದೇಶಕರು ಹಾಗೂ ಇತರೆ ಅಧಿಕಾರಿಗಳು ಅನಿರೀಕ್ಷಿತ ಭೇಟಿ ನೀಡುವುದು ಹಾಗೂ ಔಷಧಿಗಳ ಲೆಕ್ಕ ಪರಿಶೋಧನೆ ನಡೆಸಲಾಗುತ್ತಿದೆ.

ರಾಜ್ಯದಲ್ಲಿ ಉಂಟಾಗಿರುವ ವರದಕ್ಷಿಣೆ ಸಾವುಗಳ ಸಂಖ್ಯೆ

೩೩೧. ಶ್ರೀ ಎಂ. ನಾರಾಯಣಸ್ವಾಮಿ (ಚೇತಮಂಗಲ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಕಳೆದ ೩ ವರ್ಷಗಳಲ್ಲಿ ರಾಜ್ಯದಲ್ಲಿ ಉಂಟಾಗಿರುವ ವರದಕ್ಷಿಣೆ ಸಾವುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿಗಳನ್ನು ಒದಗಿಸುವುದು)

ಆ) ಈ ವರದಕ್ಷಿಣೆ ಸಾವುಗಳ ಸಂಬಂಧದಲ್ಲಿ ಎಷ್ಟು ಜನರ ಮೇಲೆ ಕ್ರಮಕೈಗೊಳ್ಳಲಾಗಿದೆ;

ಇ) ಇವರ ಪೈಕಿ ಸರ್ಕಾರಿ ನೌಕರರೆಷ್ಟು;

ಈ) ಈ ಪ್ರಕರಣಗಳ ಇತ್ಯರ್ಥದಲ್ಲಿ ತೀವ್ರ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಈ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಗೊಳಿಸಲು ವಿಶೇಷ ನ್ಯಾಯಾಲಯವನ್ನು ರಚಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆಯೇ ?

ಶ್ರೀ ವೀರೇಂದ್ರಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಅನುಬಂಧ 'ಅ' ದಲ್ಲಿ ಕಳೆದ ೩ ವರ್ಷಗಳಲ್ಲಿ ರಾಜ್ಯದಲ್ಲಿ ಉಂಟಾದ ವರದಕ್ಷಿಣೆ ಸಾವುಗಳ ಬಗ್ಗೆ ಮಾಹಿತಿ ಒದಗಿಸಲಾಗಿದೆ.

		೧೯೮೭	೧೯೮೮	೧೯೮೯	೧೯೯೦ (೩೧-೫-೧೯೯೦ರ ವರೆಗೆ)
ಅ)	೧) ದಸ್ತಗಿರಿಯಾದವರು	೩೬೩	೫೪೭	೫೩೨	೨೧೮
	೨) ದೋಷಾರೋಪಣ ಸಲ್ಲಿಸಿದವರು	೩೩೫	೪೬೯	೩೯೩	೧೮
	೩) ಶಿಕ್ಷೆಗೊಳಗಾದವರು	೮	—	—	—
ಆ)	೧) ದಸ್ತಗಿರಿಯಾದವರು	೭	೧೭	೩೧	೧೨
	೨) ದೋಷಾರೋಪಣ ಸಲ್ಲಿಸಿದವರು	೬	೧೩	೧೨	೨
	೩) ಶಿಕ್ಷೆಗೊಳಗಾದವರು	—	—	—	—

ಈ) ಇಲ್ಲ.

ಉ) ಇಲ್ಲ.

ಅನುಬಂಧ 'ಅ'

ಕಳೆದ ೩ ವರ್ಷಗಳಲ್ಲಿ ರಾಜ್ಯದಲ್ಲಿ ಉಂಟಾಗಿರುವ ವರದಕ್ಷಿಣೆ ಸಾವುಗಳ ಕುರಿತಾದ ಜಿಲ್ಲಾವಾರು ಮಾಹಿತಿ

ಕ್ರಮ ಸಂಖ್ಯೆ	ಜಿಲ್ಲೆ	೧೯೮೭	೧೯೮೮	೧೯೮೯	೧೯೯೦
೧.	ಬೆಂಗಳೂರು ನಗರ	೩೩	೩೧	೪೬	೨೪
೨.	ಬೆಂಗಳೂರು ಗ್ರಾಮಾಂತರ	೫	೨೧	೧೯	೯
೩.	ತುಮಕೂರು	೩	೯	೧೨	೧
೪.	ಕೋಲಾರ	೭	೭	೬	೩
೫.	ಮೈಸೂರು	೮	೧೧	೧೧	೧
೬.	ಮಂಡ್ಯ	೧	೧೧	೬	೫
೭.	ಹಾಸನ	೪	೪	೪	೨
೮.	ಕೊಡಗು	–	೧	—	೧
೯.	ಶಿವಮೊಗ್ಗ	೮	೫	೪	೪
೧೦.	ಚಿತ್ರದುರ್ಗ	೪	೪	೭	೧
೧೧.	ಬಳ್ಳಾರಿ	೨	೫	೨	೧
೧೨.	ದಕ್ಷಿಣ ಕನ್ನಡ	೨	೩	೧	೧
೧೩.	ಚಿಕ್ಕಮಗಳೂರು	೧	೧	೨	೨
೧೪.	ಉತ್ತರ ಕನ್ನಡ	೨	೩	೧	೧
೧೫.	ಬೆಳಗಾಂ	೧	೮	೧೪	—
೧೬.	ಬಿಜಾಪುರ	೧	೬	೧೧	೪
೧೭.	ಧಾರವಾಡ	೨	೧೨	೧೧	೭
೧೮.	ಗುಲ್ಬರ್ಗ	೮	೨೨	೨೪	೬
೧೯.	ಬೀದರ್	೧೧	೧೬	೭	೪
೨೦.	ರಾಯಚೂರು	೩	೨	೨	೧
	ಒಟ್ಟು	೧೦೬	೧೪೨	೧೯೦	೭೪